ವಾಗುತ್ತದೆ. ತಂದೆ ತಾಯಿಗಳು ಮಕ್ಕಳಿಗೆ ಅವಮಾನವನ್ನು ಸಹಿಸುವ, ಕಷ್ಟಗಳನ್ನು ಸಹಿಸುವ ಸಾಮರ್ಥ್ಯವನ್ನು ಪಡೆಯುವಂತೆ ಮಾಡಬೇಕು. ಆಗಾಗ ದಂಡಿಸುವುದೂ ಆವಶ್ಯಕ. ಅವರು ಮಾಡಿದ್ದನ್ನೆಲ್ಲ ಹೊಗಳುವುದು, ಕೇಳಿದ್ದನ್ನೆಲ್ಲ ಕೊಡುವುದು —ಇದರಿಂದ ಮಕ್ಕಳ ಭವಿಷ್ಯ ಹಾಳಾಗುವ ಸಂಭವವಿದೆ. ಅವರು ತಮ್ಮ ಆಸೆಗಳನ್ನು ಮುಂದೂಡುವ ಮತ್ತು ನಿಗ್ರಹಿಸುವ ಸಾಮರ್ಥ್ಯ ವನ್ನು ಬೆಳಸಿಕೊಳ್ಳು ವಂತೆ ಮಾಡಬೇಕು. ಅವರು ತಮ್ಮ ಸ್ವಂತ ಸಾಧನೆಯ ಮೂಲಕ ತಾವೇ ಆತ್ಮ-ವಿಶ್ವಾಸವನ್ನು ಬೆಳಸಿಕೊಳ್ಳಲು ಅವರಿಗೆ ಸಹಾಯ ಮಾಡಬೇಕು. ❑

# ಸುಪ್ತದೈತ್ಯ

ಪ್ರಪಂಚದಲ್ಲಿರುವ ಸಿಂಹ, ಆನೆ ಮುಂತಾದ ಶಕ್ತಿಶಾಲಿ ಪ್ರಾಣಿಗಳಿಗೆ ತಮ್ಮ ಸ್ವಂತ ಅರಿವು ಉಂಟಾದರೆ ಏನಾಗುತ್ತದೆ ಎಂದು ಒಬ್ಬ ತತ್ತ್ವಜ್ಞಾನಿಯು ಪ್ರಶ್ನಿಸಿ ಅವನೇ ಉತ್ತರಿಸುತ್ತಾನೆ, ಆ ಪ್ರಶ್ನೆಗೆ ಉತ್ತರಿಸುವ ಹೊತ್ತಿಗೆ ನಾವಾರೂ ಇರುವುದೇ ಇಲ್ಲ, ಎಂದು. ಭಾರತೀಯರ ಸ್ಥಿತಿಯೂ ಇದೇ ಎಂದೆನಿಸುತ್ತದೆ. ಪ್ರಾಣಿಗಳಿಗೆ ತಮ್ಮ ಶಕ್ತಿಯ ಅರಿವಿಲ್ಲದಿರುವುದರಿಂದಲೇ ಮಾನವನು ಅವುಗಳ ಮೇಲೆ ಪ್ರಭುತ್ವವನ್ನು ಸಾಧಿಸಲು ಸಾಧ್ಯವಾಗಿದೆ. ಭಾರತೀಯರೂ ತಮ್ಮ ಹಿರಿಮೆಯನ್ನು, ವೈಭವವನ್ನು ಮರೆತಿದ್ದರಿಂದಲೇ ಸಾವಿರಾರು ವರ್ಷಗಳ ವಿದೇಶೀ ದಬ್ಬಾಳಿಕೆಯನ್ನು ಅನುಭವಿಸಬೇಕಾಯಿತು. ಈಗಲೂ ಅದೇ ಕಾರಣದಿಂದಲೇ ಸಾಂಸ್ಕೃತಿಕ ಗುಲಾಮಗಿರಿಯನ್ನು ಅನುಭವಿಸುತ್ತಿದ್ದೇವೆ.

ಡೆನ್ಮಾರ್ಕಿನ ಹೆಸ್ಟಿಂಗ್ ಕಿರ್ಚ್ಹೀನರ್ (*Hesting Kirchheiner*) ಎಂಬ ಮಹಿಳೆ ಭಾರತಕ್ಕೆ ಬಂದು ಬೇರೆ ಬೇರೆ ವೈದಿಕ ಪಂಡಿತರನ್ನು ಸಂಪರ್ಕಿಸಿ, ಅವರ ಮೂಲಕ ಸಾಂಪ್ರದಾಯಿಕ ರೀತಿಯಲ್ಲಿ ವೇದಪಠನ ಮಾಡಿಸಿ ನಾಲ್ಕು ವೇದಗಳನ್ನೂ ಟೇಪ್‌ನಲ್ಲಿ ರಿಕಾರ್ಡ್ ಮಾಡಿಸಿದ್ದಾರೆ. ಇದಕ್ಕೆ ಆಕೆಗೆ ೧೫ ವರ್ಷಗಳು ಹಿಡಿಯಿತಂತೆ. ಮುಂದೆ ಇದನ್ನು *CD*ಗೆ ಪರಿವರ್ತಿಸುವ ಯೋಜನೆಯೂ ಇದೆ. ವೈದಿಕ ಸಂಸ್ಕೃತಿ ನಶಿಸಿ ಹೋಗುತ್ತಿರುವುದರಿಂದ ಮುಂದಿನವರಿಗೆ ಅದನ್ನು ಉಳಿಸುವುದಕ್ಕಾಗಿ ಅವರು ಈ ಸಾಹಸ ಕಾರ್ಯವನ್ನು ಮಾಡಿದ್ದಾರೆ. ಈ ರಿಕಾರ್ಡ್ ೨೨೪ ಟೇಪುಗಳನ್ನು ಒಳಗೊಂಡಿದೆ ಮತ್ತು ಅವಧಿ ಒಟ್ಟು ಸುಮಾರು ೩೩೨ ಗಂಟೆಗಳು. ಇದೊಂದು ಮುಂದಿನ ಪೀಳಿಗೆಗೆ ಅಪಾರ ಕೊಡುಗೆ ಎಂದು ಅವರು ಭಾವಿಸುತ್ತಾರೆ.

'ಭಾರತ ಶ್ರೇಷ್ಠ ಸಂಸ್ಕೃತಿಯನ್ನು ಮತ್ತು ಅತುಲನೀಯ ಜ್ಞಾನ ಸಂಪತ್ತನ್ನು ಹೊಂದಿದೆ. ಜಗತ್ತು ಇದರ ಬಗ್ಗೆ ಹೆಚ್ಚು ತಿಳಿದುಕೊಳ್ಳುವುದು ಅವಶ್ಯಕ'ಎನ್ನುತ್ತಾರೆ ಅವರು. ಭಾರತೀಯರ ಔದಾರ್ಯ, ಪ್ರೀತಿಪೂರ್ವಕ ವ್ಯವಹಾರ ಇವುಗಳನ್ನು ಪ್ರಶಂಸಿಸುತ್ತ ಅವರು ಹೇಳುತ್ತಾರೆ : 'ಭಾರತೀಯರ ಆಲೋಚನಾ ಮತ್ತು ಕಾರ್ಯ ಶಕ್ತಿ ಅಸೂಯಾಜನಕವಾದುದು. ಅವರು ಏನು ಸಾಧಿಸಬಲ್ಲರು ಎಂಬುದನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ.'

ಇಷ್ಟಾದರೂ ಭಾರತೀಯರು ತಮ್ಮ ಶ್ರೇಷ್ಠತೆಯ ಅರಿವಿಲ್ಲದೆ ಸ್ವಾಭಿಮಾನ ಶೂನ್ಯರಾಗಿದ್ದಾರೆ. ಆಂಜನೇಯನು ತನ್ನ ಸಾಮರ್ಥ್ಯದ ಅರಿವಿಲ್ಲದೆ ಕುಳಿತುಕೊಂಡಿದ್ದಾಗ ಜಾಂಬವಂತನು ಬಂದು ಅವನನ್ನು ಎಚ್ಚರಿಸುತ್ತಾನೆ. ಆಗ ಆಂಜನೇಯನು ಸಮುದ್ರೋಲ್ಲಂಘನ ಮಾಡುತ್ತಾನೆ. ಹಾಗೆಯೇ ಸ್ವಾಮಿ ವಿವೇಕಾನಂದರು ಬಂದು ಭಾರತದ ಹಿರಿಮೆಯ ಅರಿವನ್ನು ಮೂಡಿಸಿ ಭಾರತೀಯರನ್ನು ಎಚ್ಚರಿಸಿದರು. ಭಾರತವು ಇನ್ನೂ ಎಚ್ಚರಗೊಳ್ಳುತ್ತಲೇ ಇದೆ. ಎಷ್ಟಾದರೂ ಬೃಹತ್ ದೇಶವಲ್ಲವೇ? ❑

# ಧರ್ಮವಿಕೃತಿ

ತಿರುಮಲವನ್ನು ಕಲಿಯುಗದ ವೈಕುಂಠ ಎಂದು ಕರೆಯುತ್ತಾರೆ. ಅಲ್ಲಿ ಪ್ರಾಣ ಬಿಟ್ಟರೆ ನೇರವಾಗಿ ಸ್ವರ್ಗಕ್ಕೆ ಹೋಗಬಹುದೆಂಬ ನಂಬಿಕೆಯಿಂದ ಕೆಲವರು ಅಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕಳೆದ ನಾಲ್ಕೈದು ತಿಂಗಳಿನಲ್ಲಿ ೧೪ಕ್ಕೂ ಹೆಚ್ಚು ಜನರು ಹಾಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ. ಕಳೆದ ೧೦ ವರ್ಷಗಳಲ್ಲಿ ೭೦೦ ಜನರು ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪತ್ರಿಕೆಯೊಂದು ವರದಿ ಮಾಡುತ್ತದೆ. ಸುಮಾರು ಮೂರು ವರ್ಷಗಳ ಹಿಂದೆ (೧೯೯೭) ಹೇಲ್ ಬಾಪ್ಪ್ (*Hale Bopp*) ಎಂಬ ಧೂಮಕೇತು ಕಾಣಿಸಿಕೊಂಡಾಗ ಅಮೆರಿಕದ ೩೯ ಜನ ಪಂಥೀಯರು, ಧೂಮಕೇತುವಿನ ಮೂಲಕ ಸ್ವರ್ಗಕ್ಕೆ ಹೋಗುತ್ತೇವೆ ಎಂಬ ನಂಬಿಕೆಯಿಂದ, ಸಮೂಹ ಆತ್ಮಹತ್ಯೆ ಮಾಡಿಕೊಂಡರು.

'ಇಲ್ಲಿ ಸಲ್ಲದವನು ಅಲ್ಲಿಯೂ ಸಲ್ಲನಯ್ಯ' ಎಂದು ಬಸವಣ್ಣನವರು ಹೇಳುತ್ತಾರೆ. ಇಲ್ಲಿಯೇ ತಮ್ಮ ಜೀವನದಲ್ಲಿ ಸುಖವನ್ನು ಕಾಣಲಾಗದವರು ಸ್ವರ್ಗವನ್ನು ಕಲ್ಪಿಸಿಕೊಳ್ಳುತ್ತಾರೆ, ಅಲ್ಲಿಗೆ ಹೋಗಬೇಕೆಂದು ಬಯಸುತ್ತಾರೆ. ಅದಕ್ಕೆ ಯಾವುದೊ ಧಾರ್ಮಿಕ ನಂಬಿಕೆಯ ನೆರಳಿನ ಆಶ್ರಯವನ್ನು ಪಡೆಯುತ್ತಾರೆ. ಹೀಗೆ ತಾವೂ ವಂಚಿತರಾಗಿ ಇತರರನ್ನೂ ವಂಚಿಸುತ್ತಾರೆ. ಒಂದು ವೇಳೆ ಅಂತಹ ಸ್ವರ್ಗವೊಂದು ಇರುವುದಾದರೆ ಈ ದುಃಖಿತರು ಅಲ್ಲಿಗೆ ಹೋಗಿ ಅದನ್ನೂ ದುಃಖಮಯವಾಗಿ ಮಾಡುವುದರಲ್ಲಿ ಸಂದೇಹವಿಲ್ಲ. ಅನಂತರ ಈ ಭೂಮಿ ಸುಖವೇ ಮೇಲೆನಿಸಿ ಅವರು ಪುನಃ ಇಲ್ಲಿಗೇ ಹಿಂದಿರುಗಬಹುದು. ಏಕೆಂದರೆ ಇಲ್ಲಿ ಸುಖದುಃಖಗಳೆರಡೂ ಇವೆ. ಇಲ್ಲಿ ಸ್ವಲ್ಪವಾದರೂ ಸುಖ ಅನುಭವಿಸಬಹುದು. ಆದರೆ ಸ್ವರ್ಗಕ್ಕೆ ಕೇವಲ ದುಃಖಿಗಳೇ, 'ಇಲ್ಲಿ ಸಲ್ಲದವರೇ' ಹೋಗುವುದರಿಂದ ಅದು ಅತ್ಯಂತ ದುಃಖಮಯವಾಗಿರಲು ಸಾಧ್ಯ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ : '**ಯಾವ ಧರ್ಮ ಇಲ್ಲಿ ಸುಖ, ಶಾಂತಿ, ಸ್ವಾತಂತ್ರ್ಯವನ್ನು ನೀಡದೆ ಸತ್ತಮೇಲೆ ಸುಖ ಸಿಕ್ಕುತ್ತದೆ, ಮುಕ್ತಿ ಸಿಕ್ಕುತ್ತದೆ ಎನ್ನುವುದೊ ಅಂತಹ ಧರ್ಮ ನನಗೆ ಬೇಡ.**' ❑